ನಾಗಮಂಗಲ ತಾಲ್ಲೂಕಿನಲ್ಲಿ ರೇಷ್ಮೆ ಫಾರಂ ಸ್ಥಾಪಿಸುವ ಬಗ್ಗೆ

೪೨೬. ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ).—ಮಾನ್ಯ ಸಮಾಜ ಕಲ್ಯಾಣ, ಕಾರ್ಮಿಕ, ರೇಷ್ಮೆ, ಗಣಿ ಮತ್ತು ಭೂ ವಿಜ್ಞಾನ ಮಂತ್ರಿಗಳು ಈಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ನಾಗಮಂಗಲ ತಾಲ್ಲೂಕು ಬೆಳ್ಳೂರು ಹೋಬಳಿ ಸಣಬ ಗ್ರಾಮದ ಸರ್ವೆ ನಂ. ೩೪ರ ಸರ್ಕಾರಿ ಜಮೀನಿನಲ್ಲಿ ಒಂದು ರೇಷ್ಮೆ ಫಾರಂನ್ನು ಮಾಡಲು ಉದ್ದೇಶಿಸಿದ್ದು ಸರ್ಕಾರದ ಗಮನದಲ್ಲಿಯೇ?

ಆ) ೧೯೮೪ರಲ್ಲಿ ಕೈಗೊಂಡ ಸರ್ಕಾರದ ಈ ನಿರ್ಧಾರವನ್ನು ಇದುವರೆವಿಗೂ ಜಾರಿ ಮಾಡದಿರಲು ಕಾರಣಗಳೇನು?

ಇ) ಶೀಘ್ರವಾಗಿ ಈ ರೇಷ್ಮೆ ಫಾರಂನ್ನು ಪ್ರಾರಂಭಿಸಲು ಕೈಗೊಳ್ಳಲಿರುವ ಕ್ರಮಗಳೇನು ?

ಈ) ಈ ಫಾರಂಗೆ ಜಮೀನನ್ನು ಒದಗಿಸಲು ಸರ್ಕಾರದ ಆಜ್ಞೆಯಾಗಿದ್ದರು ಸಹ ಮಂಡ್ಯ ಜಿಲ್ಲಾಧಿಕಾರಿಗಳು ಈ ಸರ್ಕಾರಿ ಜಮೀನನ್ನು ವರ್ಗ ಮಾಡದಿರಲು ಕಾರಣವೇನು?

ಶ್ರೀ ಬಿ. ಶಿವಣ್ಣ (ಸಮಾಜ ಕಲ್ಯಾಣ, ಕಾರ್ಮಿಕ ರೇಷ್ಮೆ, ಗಣಿ ಮತ್ತು ಭೂವಿಜ್ಞಾನ ಸಚಿವರು).—

ಅ) ನಾಗಮಂಗಲ ತಾಲ್ಲೂಕು ಬೆಳ್ಳೂರು ಹೋಬಳಿ ಸರ್ವೆ ನಂ. ೩೪ರಲ್ಲಿ ರೇಷ್ಮೆ ಫಾರಂನ್ನು ಪ್ರಾರಂಭಿಸಲು ಉದ್ದೇಶಿಸಲಾಗಿಲ್ಲ. ಆದರೆ ಸರ್ವೆ ನಂ. ೩೦ರಲ್ಲಿ ರೇಷ್ಮೆ ಫಾರಂನ್ನು ಪ್ರಾರಂಭಿಸುವ ಉದ್ದೇಶವಿತ್ತು.

ಆ) ಮಂಡ್ಯ ಜಿಲ್ಲೆಯ ಹೆಚ್. ಮಲ್ಲಿಗೆರೆ ಮತ್ತು ಚಿಕ್ಕೋನ ಹಳ್ಳಿ ಈ ಸ್ಥಳಗಳಲ್ಲಿ ರೇಷ್ಮೆ ಕೃಷಿ ಕ್ಷೇತ್ರಗಳನ್ನು ಸ್ಥಾಪನೆ ಮಾಡಲು ಸರ್ಕಾರ ಆಜ್ಞೆ ಹೊರಡಿಸಿದ್ದು, ಈ ಆಜ್ಞೆ ಹೊರಡಿಸುವ ಮುಂಚಿತವಾಗಿ ಬೆಳ್ಳೂರು ಹೋಬಳಿ ಸಣಬ ಗ್ರಾಮದ ಸರ್ವೆ ನಂ. ೩೦ರ ಜಮೀನು ರೇಷ್ಮೆ ಇಲಾಖೆಗೆ ವರ್ಗಾವಣೆಯಾಗಿದ್ದ ಕಾರಣ ಸಣಬ ಗ್ರಾಮದಲ್ಲಿ ರೇಷ್ಮೆ ಕೃಷಿ ಕ್ಷೇತ್ರ ಸ್ಥಾಪಿಸಲು ಸಾಧ್ಯವಾಗಿಲ್ಲ.

ಇ) ಯಾವುದು ಇಲ್ಲ.

ಈ) ಇಲ್ಲ.

ಬೆಂಗಳೂರು ನಗರದ ಸಾರಿಗೆಯ ವ್ಯವಸ್ಥೆಯ ಬಗ್ಗೆ

೪೨೭. ಶ್ರೀ ಎಂ. ಎಸ್. ಆತ್ಮಾನಂದ (ಮಂಡ್ಯ).—ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬೆಂಗಳೂರು ನಗರದ ಜನತೆಗೆ ಸೇವೆ ಒದಗಿಸುತ್ತಿರುವ ಬಿ.ಟಿ.ಎಸ್. ಸಾರಿಗೆ ವ್ಯವಸ್ಥೆಯು ನಗರದ ಜನಸಂಖ್ಯೆಗೆ ಅನುಗುಣವಾಗಿ ಇಲ್ಲದಿರುವುದು ಸರ್ಕಾರದವರಿಗೆ ಗೊತ್ತಿದೆಯೇ?

ಆ) ಹಾಗಿದ್ದಲ್ಲಿ, ಈ ಸಾರಿಗೆ ವ್ಯವಸ್ಥೆಯಲ್ಲಿನ ಕೊರತೆ ನೀಗಿಸಿ ಸಮರ್ಪಕವಾಗಿ ಸಾರಿಗೆ ಸೌಲಭ್ಯವನ್ನೊದಗಿಸಲು ಸರ್ಕಾರದವರು ಕೈಗೊಳ್ಳಲಿರುವ ಕ್ರಮಗಳೇನು?

ಇ) ಪರ್ಯಾಯ ಸಾರಿಗೆ ವ್ಯವಸ್ಥೆಯ ಬಗ್ಗೆ ಸರ್ಕಾರದವರು ಯೋಜನೆಯನ್ನೇನಾದರು ರೂಪಿಸಿದ್ದಾರೆಯೇ?

ಶ್ರೀ ಕೆ. ಜೆ. ಜಾರ್ಜ್ (ಆಹಾರ ಮತ್ತು ನಾಗರೀಕ ಸರಬರಾಜು ಮತ್ತು ಸಾರಿಗೆ ರಾಜ್ಯ ಮಂತ್ರಿಗಳು).—

ಅ) ಹೌದು.

ಆ) ಸಾರ್ವಜನಿಕರ ಸಾರಿಗೆ ಬೇಡಿಕೆಯನ್ನು ಪೂರೈಸಲು ಬೆಂಗಳೂರು ನಗರ ಸಾರಿಗೆ ವಿಭಾಗದಲ್ಲಿ ವಾಹನಗಳ ಸಂಖ್ಯೆಯನ್ನು ಹಂತಹಂತವಾಗಿ ಹೆಚ್ಚಿಸಲಾಗುತ್ತಿದೆ.

ಇ) ಇಲ್ಲ